**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆ ಇಲಾಖೆ**

**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಿಷಯ: 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ 'ವೈದ್ಯಕೀಯ ಸಾಧನ ಸಲಕರಣೆಗಳ' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಆದಿತ್ಯ ಸರ್ಜಿಕಲ್ ಕಂ. ಬೆಂಗಳೂರು ಇವರ ಅರ್ಜಿ ದಿ:08-11-2013, (ಟಿನ್: 29600398255)

***

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿಯಲ್ಲಿ ನೋಂದಣಿದಾರರಾದ ಮೆ: ಆದಿತ್ಯ ಸರ್ಜಿಕಲ್ ಕಂ., ನಂ.46, ಪಶ್ಚಿಮ ಆಂಜನೇಯ ದೇವಾಲಯದ ಬೀದಿ, ಬಸವನಗುಡಿ, ಬೆಂಗಳೂರು-560004 ಇವರು ಮೇಲ್ಕಂಡ ಅರ್ಜಿಯಲ್ಲಿ 'ವೈದ್ಯಕೀಯ ಸಾಧನ ಸಲಕರಣೆಗಳ' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ),ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**<u>ಸ್ಪಷ್ಟೀಕರಣ ಆದೇಶ ಸಂಖ್ಯೆ:ಸಿಎಲ್‌ಆರ್/ಸಿಆರ್-111/13-14, ದಿ:23-12-2013</u>**

<table>
<tr><th>ಕ್ರಸಂ.</th><th>ಉತ್ಪನ್ನದ ಹೆಸರು</th><th>ಅವಧಿ/ತೆರಿಗೆ ದರ</th></tr>
<tr><td>1.</td><td>ಬ್ಲಡ್ ಕಲೆಕ್ಷನ್ ಮಾನಿಟರ್</td><td rowspan="5">(i) ದಿನಾಂಕ 01.05.2005 ರಿಂದ 31.03.2010ರವರೆಗೆ 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)ರಂತೆ ಶೇಕಡಾ 12.5.<br>(ii) ದಿನಾಂಕ 01.04.2010 ರಿಂದ 31.03.2011ರವರೆಗೆ 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ4(1)(ಬಿ)(ii)ರಂತೆ ಶೇಕಡಾ 13.5.<br>(iii) ದಿನಾಂಕ 01.04.2011 ರಿಂದ 31.07.2012ರವರೆಗೆ 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)(iii)ರಂತೆ ಶೇಕಡಾ 14.<br>(iv) ದಿನಾಂಕ 01.08.2012 ರಿಂದ 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)(iii)ರಂತೆ ಶೇಕಡಾ 14.5.</td></tr>
<tr><td>2.</td><td>ಬ್ಲಡ್ ಸ್ಟೋರೇಜ್ ರೆಫ್ರಿಜರೇಟರ್ ಮತ್ತು ಡೀಪ್ ಫ್ರೀಜರ್</td></tr>
<tr><td>3.</td><td>ಇನ್‌ಕ್ಯುಬೇಟರ್ ಒಳಗೊಂಡ ಪ್ಲೇಟ್‌ಲೆಟ್ ಅಜಿಟೇಟರ್</td></tr>
<tr><td>4.</td><td>ಪ್ಲಾಸ್ಮಾ ಎಕ್ಸ್‌ಪ್ರೆಸರ್ (ಎಲೆಕ್ಟ್ರಾನಿಕ್ ಮತ್ತು ಮ್ಯಾನ್ಯುಯಲ್)</td></tr>
<tr><td>5</td><td>ಕ್ರೈಯೋ ಬಾತ್</td></tr>
</table>

(ಅಜಯ್ ಸೇಠ್)

ವಾಣಿಜ್ಯ ತೆರಿಗೆಗಳ ಆಯುಕ್ತರು, (ಕರ್ನಾಟಕ), ಬೆಂಗಳೂರು